C.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.115/2021

ದಿನಾಂಕಃ 16.11.2022 ರಂದು ಪ್ರಮಾಣ ವಚನ ಬೋದಿಸಲಾಗಿದೆ

ಸಿ. ಡಬ್ಲ್ಯೂ:6 ಪಿ. ಡಬ್ಲ್ಯೂ:6

| | |
|---|---|
| ಸಾಕ್ಷಿದಾರರ ಹೆಸರು | ನಾಗರಾಜು |
| ತಂದೆಯ ಹೆಸರು | ಕೃಷ್ಣಮೂರ್ತಿ |
| ವಯಸ್ಸು | 44 ವರ್ಷ |
| ಉದ್ಯೋಗ | ವ್ಯವಸಾಯ |
| ವಾಸ | ಕೃಷ್ಣಾ ಪುರ, ಮಂಡ್ಯ ಜಿಲ್ಲೆ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ಬೋರೆಗೌಡರು ಗೊತ್ತು, ಇವರು ನಮ್ಮ ಮನೆ ಹಿಂದುಗಡೆ ವಾಸವಿದ್ದಾರೆ, ಚಾಸಾ.2 ಗೊತ್ತು, ಅವರು ಚಾಸಾ.1 ರವರ ಮನೆಯ ಹಿಂಭಾಗದಲ್ಲಿ ವಾಸ ಇದ್ದಾರೆ. ಚಾಸಾ.2 ರವರು ಕೆಂಪಣ್ಣ ಎಂಬುವರ ಮನೆಯಲ್ಲಿ ಬಾಡಿಗೆಗೆ 3 ವರ್ಷದಿಂದ ವಾಸ ಇದ್ದಾರೆ. ಚಾಸಾ.2 ರವರಿಗೆ ತಂದೆ ಇಲ್ಲ, ಅವರ ತಾಯಿ ಬೆಂಗಳೂರಿನಲ್ಲಿ ವಾಸ ಇದ್ದಾರೆ. ಜಮೀನು ತೋಟ ನೋಡಿಕೊಳ್ಳುವುದಕ್ಕೆ, ಚಾಸಾ.2 ಊರಿಗೆ ಬಂದಾಗ ಈಗ ವಾಸ ಇರುವ ಬಾಡಿಗೆ ಮನೆಯಲ್ಲಿ ಇರುತ್ತಿದ್ದರು. ಚಾಸಾ.3 , ಚಾಸಾ.2 ರವರ ತಾಯಿ. ನ್ಯಾಯಾಲಯದ ಮುಂದೆ ಇರುವ ಆರೋಪಿ ಗೊತ್ತು, ಆತ ಚಾಸಾ.2 ರವರ ಸ್ವಂತ ಅಣ್ಣನ ಮಗ. ಆರೋಪಿ ಬೆಂಗಳೂರಿನಲ್ಲಿ ಇರುತ್ತಾರೆ. ಆರೋಪಿ ಜಮೀನು ಕೃಷ್ಣಾಪುರದಲ್ಲಿ ಇದೆ.

2 ವರ್ಷಗಳ ಹಿಂದೆ ಹೊಡೆದಾಟದಲ್ಲಿ, ಚಾಸಾ.2 ರವರ ಬಲಗೈಗೆ ಜವಳಿ ಕುಡುಗೋಲಿನಿಂದ (ಕುಡುಗೋಲು) ಕೈ ಕತ್ತರಿಸಿತ್ತು , ಹಣೆಗೆ ಪೆಟ್ಟಾಗಿತ್ತು. ಚಾಸಾ.1 ರವರ ಮನೆ ಮುಂದೆ ಚಾಸಾ.2 ಅಪ್ಪ ಅಮ್ಮ ಎಂದು ಕೂಗಿಕೊಳ್ಳುತ್ತಿದ್ದ, ನಾನು ಹೋಗಿ ನೋಡಿದಾಗ ಚಾಸಾ.2 ಬಿದ್ದು ಒದ್ದಾಡುತ್ತಿದ್ದನು, ಆತನ ಬಲಗೈ ಕತ್ತರಿಸಿ ರಕ್ತ ಬರುತ್ತಿತ್ತು . ಆಂಬ್ಯೂಲೆನ್ಸ್ ಗೆ ಫೋನ್ ಮಾಡಿ

ಚಾಸಾ.2 ರವರನ್ನು ಚುಂಚನಗಿರಿ ಆಸ್ಪತ್ರೆಗೆ ಕಳುಹಿಸಿಕೊಟ್ಟೆವು. ಚುಂಚನಗಿರಿ ಆಸ್ಪತ್ರೆಯಿಂದ ಚಾಸಾ.2 ರವರನ್ನು ಬೆಂಗಳೂರಿನಲ್ಲಿರುವ ಲಕ್ಷ್ಮಿ ಸ್ಪೆಷಾಲಿಟಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು.

ಚಾಸಾ.2 ಕೆಳಗೆ ಬಿದ್ದು ಬಾಯಿ ಬಡಿದುಕೊಳ್ಳುತ್ತಿದ್ದಾಗ ಹೆಂಗಸರು ಮಕ್ಕಳು, ಸುಮಾರು ಜನರು ಸ್ಥಳಕ್ಕೆ ಬಂದರು. ಚಾಸಾ.2 ರವರನ್ನು ಚುಂಚನಗಿರಿ ಆಸ್ಪತ್ರೆಗೆ ನಾನು, ಚಾಸಾ.7 ಲೋಕೇಶ, ಚಾಸಾ.8 ನಾರಾಯಣ, ಚಾಸಾ.9 ಶಂಕರೇಗೌಡ ಹಾಗೂ ಚಾಸಾ.1 ಕರೆದುಕೊಂಡು ಹೋದೆವು. ಬೆಂಗಳೂರು ಆಸ್ಪತ್ರೆಗೆ ನಾನು ಮತ್ತು ಚಾಸಾ.7 ಲೋಕೇಶ , ಚಾಸಾ.2 ರವರನ್ನು ಕರೆದುಕೊಂಡು ಹೋದೆವು. ಚಾಸಾ.2 ರವರನ್ನು ಗಲಾಟೆಯ ಬಗ್ಗೆ ವಿಚಾರಿಸಿದಾಗ ಅವರ ಅಣ್ಣನ ಮಗ ದಿಲೀಪ ತೋಟದಲ್ಲಿ ತೆಂಗಿನ ಕಾಯನ್ನು ಕಿತ್ತು ಇಟ್ಟಿದ್ದನ್ನು , ಅದನ್ನು ಚಾಸಾ.2 ಹೋಗಿ ಚೀಲದಲ್ಲಿ ತುಂಬಿಕೊಂಡು ಬಂದಿದ್ದನು, ಆ ಕಾರಣಕ್ಕೆ ದಿಲೀಪ ಚಾಸಾ.2 ರವರಿಗೆ ಹಲ್ಲೆ ಮಾಡಿದ್ದಾಗಿ ತಿಳಿಸಿದನು. ಚಾಸಾ.2 , ಕೆಂಪಣ್ಣನವರ ಮನೆಯಲ್ಲಿ ಬಾಡಿಗೆಗೆ ಇದ್ದಾಗ , ದಿಲೀಪ ಬಂದು ಚಾಸಾ.2 ರವರನ್ನು ಕರೆದಿದ್ದಾಗ ಹೊರಗಡೆ ಬಂದಾಗ ಹೊಡೆದಿದ್ದಾಗಿ ಹೇಳಿದನು. ಪೊಲೀಸರು ನನ್ನನ್ನು ಗಲಾಟೆ ಬಗ್ಗೆ ವಿಚಾರಿಸಿ ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದರು. ರಾತ್ರಿ ಗಲಾಟೆಯಾದಾಗಲೇ ಚಾಸಾ.7 ಪೊಲೀಸರಿಗೆ ಫೋನ್ ಮಾಡಿ ಗಲಾಟೆ ಬಗ್ಗೆ ತಿಳಿಸಿದರು.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎನ್.ಎನ್. ವಕೀಲರಿಂದಃ</u>

ನಾನು ಗಲಾಟೆಯನ್ನು ಕಣ್ಣಾರೆ ನೋಡಿಲ್ಲ ಎಂದರೆ ಸರಿ.ಗಲಾಟೆ ನಡೆದಿದ್ದ ನಿಖರವಾದ ದಿನಾಂಕ, ತಿಂಗಳು ವರ್ಷ ನನಗೆ ಗೊತ್ತಿಲ್ಲ ಎಂದರೆ ಸರಿ. ಚಾಸಾ.2 ರವರು ಕೂಗಾಟ ಕೇಳಿಸಿಕೊಂಡು ನಾನು ಹೊರಗಡೆ ಬಂದಾಗ, ಆ ಸಂದರ್ಬದಲ್ಲಿ ಆರೋಪಿ ದಿಲೀಪ ಅಲ್ಲಿ ಇರಲಿಲ್ಲ ಎಂದರೆ ಸರಿ. ಸ್ಥಳದಲ್ಲಿ ಚಾಸಾ.1 ಬೋರೆಗೌಡ , ಅವರ ಹೆಂಡತಿ, ನಾನು, ಚಾಸಾ.7 , ಚಾಸಾ.9 ಇದ್ದೆವು. 20 ರಿಂದ 25 ಜನರು ಸ್ಥಳದಲ್ಲಿ ಸೇರಿದ್ದರು. ಚಾಸಾ.7 ಲೋಕೇಶ ಪೊಲೀಸರಿಗೆ ಫೋನ್ ಮಾಡಿದರು. ಪೊಲೀಸರು ಸ್ಥಳಕ್ಕೆ ಬರಲಿಲ್ಲ. ನಮ್ಮ ಊರು ಕೃಷ್ಣಾಪುರದಿಂದ ಬೆಳ್ಳೂರು ಪೊಲೀಸ್ ಠಾಣೆ 12 ಕಿ.ಮಿ ಆಗುತ್ತದೆ. 12 ಕಿ.ಮಿ ಅನ್ನು ಅರ್ದ ಗಂಟೆಯಲ್ಲಿ ತಲುಪಬಹುದು ಎಂದರೆ ಸರಿ. ಚಾಸಾ.1 ರವರ ಮನೆಯಿಂದ ಕಿರುಚಾಡುತ್ತಿದ್ದ ಶಬ್ದ ಕೇಳಿಸಿತು. ಕೂಗಾಟದ ಶಬ್ದ ಕೇಳಿ ನಾನು ಸ್ಥಳಕ್ಕೆ ಹೋದಾಗ ಚಾಸಾ.2, ಚಾಸಾ.1 ರವರ ಮನೆ ಬಳಿ ಇದ್ದರು. ಚಾಸಾ.2 ವಾಸವಾಗಿರುವ ಮನೆಯ ಅಕ್ಕಪಕ್ಕದಲ್ಲಿ ಚಾಸಾ.1 , ಚಾಸಾ.5, ಶಂಕರಪ್ಪ ಮತ್ತು ಉಮೇಶ್ ಕೆ.ಬಿ ರವರ ಮನೆಗಳು ಇವೆ. ಇವರೆಲ್ಲರ ಮನೆಗಳಿಗಿಂತ ಚಾಸಾ.1 ರವರ ಮನೆ ದೂರದಲ್ಲಿ ಇದೆ ಎಂದರೆ ಸಾಕ್ಷಿಯು ಮಧ್ಯದಲ್ಲಿ ಒಂದು ಖಾಲಿ ಸೈಟು ಇದೆ ಎಂದು ಹೇಳುತ್ತಾರೆ. ಚಾಸಾ.5 ಮಧುರವರ ಮನೆ ಚಾಸಾ.2 ರವರ ಮನೆಯ ಪಕ್ಕದಲ್ಲಿ ಇದೆ . ಚಾಸಾ.2 ರವರ ಮನೆಯ ಮಾಲೀಕರಾದ

ಕೆಂಪಣ್ಣನವರು ನಮ್ಮ ಗ್ರಾಮದಲ್ಲಿ ವಾಸ ಇಲ್ಲ, ಅವರು ತೀರಿಕೊಂಡಿದ್ದಾರೆ. ಕೆಂಪಣ್ಣನವರ ಕುಟುಂಬಸ್ಥರು ವಳರೆಗೆಪುರ ಗ್ರಾಮದಲ್ಲಿ ವಾಸ ಇದ್ದಾರೆ.ಚಾಸಾ.2 ರವರು ಬಾಡಿಗೆಗೆ ಇರುವ ಬಗ್ಗೆ ಬಾಡಿಗೆ ದಾಖಲಾತಿಗಳನ್ನು ನಾನು ನೋಡಿರುವುದಿಲ್ಲ. ಚಾಸಾ.2 ಮತ್ತು ಚಾಸಾ.3 ಬೆಂಗಳೂರಿನಲ್ಲಿ ವಾಸ ಇದ್ದಾರೆ ಎಂದರೆ ಸಾಕ್ಷಿಯು ಚಾಸಾ.2 ಊರಿನಲ್ಲಿ ವಾಸ ಇದ್ದಾರೆ ಹಾಗೂ ಚಾಸಾ.3 ಬೆಂಗಳೂರಿನಿಂದ ಊರಿಗೆ ಬಂದು ಹೋಗಿ ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ. ಆರೋಪಿ ಬೆಂಗಳೂರಿನಲ್ಲಿ ಏನು ಕೆಲಸ ಮಾಡಿಕೊಂಡಿದ್ದಾರೆ ಅಂತ ಗೊತ್ತಿಲ್ಲ. ಈ ದಿವಸ ಸಾಕ್ಷಿ ನುಡಿಯಲು ನಾನು, ಲೋಕೇಶ, ಮಧು ಮತ್ತು ಶರತ್ ಒಟ್ಟಿಗೆ ಬಂದಿದ್ದೇವೆ. ಬೆಂಗಳೂರಿನಿಂದ ಶಂಕರೇಗೌಡ ಹಾಗೂ ನಾರಾಯಣ ಸಾಕ್ಷಿ ಹೇಳಲು ನ್ಯಾಯಾಲಯಕ್ಕೆ ಬಂದಿದ್ದಾರೆ. ನಾವೆಲ್ಲರೂ ಚಾಸಾ.2 ಮತ್ತು ಚಾಸಾ.3 ರವರ ಜೊತೆ ಒಟ್ಟಿಗೆ ಮಾತನಾಡಿಕೊಂಡು ನ್ಯಾಯಾಲಯದ ಆವರಣದಲ್ಲಿ ಈ ದಿವಸ ಬೆಳಗ್ಗೆ ಕುಳಿತಿದ್ದೆವು ಎಂದರೆ ಸರಿಯಲ್ಲ. ನಾವೆಲ್ಲರೂ ಚಾಸಾ.2 ಮತ್ತು ಚಾಸಾ.3 ರವರನ್ನು ಬೇಟಿಯಾಗಿ ಜೊತೆಯಲ್ಲಿದ್ದರೂ ಸಹಾ , ನಾನು ಉದ್ದೇಶಪೂರ್ವಕವಾಗಿ ಜೊತೆಯಲ್ಲಿ ಇರಲಿಲ್ಲ ಬೇಟಿಯಾಗಿರಲಿಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ.2 ರವರ ಕೈ ಮೇಲೆ ಮತ್ತು ಹಣೆ ಮೇಲೆ ಜವಳಿ ಕುಡುಗೋಲಿನಿಂದ ಹೊಡೆದು ಗಾಯ ಪಡಿಸಿದ್ದನ್ನು ನಾನು ಕಣ್ಣಾರೆ ನೋಡಿಲ್ಲ ಎಂದರೆ ಸರಿ. ಆರೋಪಿ , ಚಾಸಾ.2 ರವರಿಗೆ ಹೊಡೆದು ಗಾಯ ಪಡಿಸಿದನು ಅಂತ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಜವಳಿ ಕುಡುಗೋಲನ್ನು ಕಾಯಿ ಕೀಳುವುದಕ್ಕೆ ಬಳಸುತ್ತಾರೆ. ಕುಡುಗೋಲನ್ನು ಹುಲ್ಲು ಕುಯ್ಯುವುದಕ್ಕೆ, ಜೋಳದ ಕಡ್ಡಿಯನ್ನು ತುಂಡರಿಸುವುದಕ್ಕೆ ಬಳಸುತ್ತಾರೆ ಎಂದರೆ ಸರಿ .ಕಾಯಿ ಕೀಳಲು ಉಪಯೋಗಿಸುವ ಜವಳಿ ಕುಡುಗೋಲು ಬೇರೆ ಹಾಗೂ ಹುಲ್ಲು ಕುಯ್ಯಲು ಉಪಯೋಗಿಸುವ ಕುಡುಗೋಲು ಬೇರೆ ಎಂದರೆ ಸರಿ. ಚಾಸಾ.7 ಆಂಬ್ಯೂಲೆನ್ಸ್ ಗೆ ಫೋನ್ ಮಾಡಿದರು. ರಾತ್ರಿ 12 ಅಥವಾ 12.45 ಗಂಟೆಗೆ ಆಂಬೂಲೆನ್ಸ್ ಸ್ಥಳಕ್ಕೆ ಬಂದಿತ್ತು.ಆಂಬ್ಯೂಲೆನ್ಸ್ ನಲ್ಲಿ ನಾನು , ಚಾಸಾ.1 , ಚಾಸಾ.2 , ಚಾಸಾ.7, ಚಾಸಾ.8 ಮತ್ತು ಚಾಸಾ.9 ಹೋದೆವು. ಬೆಂಗಳೂರಿಗೆ , ಆಂಬ್ಯೂಲೆನ್ಸ್ ನಲ್ಲಿ ಚಾಸಾ.2 ರವರೊಂದಿಗೆ ನಾನು ಮತ್ತು ಚಾಸಾ.7 ಹೋದೆವು. ಬೆಂಗಳೂರು ಆಸ್ಪತ್ರೆಗೆ ಹೋದಾಗ ಬೆಳಗಿನ ಜಾವ 3.00 ಗಂಟೆ ಆಗಿತ್ತು. ಚಾಸಾ.2 ರವರನ್ನು ಚುಂಚನಗಿರಿ ಆಸ್ಪತ್ರೆಯಿಂದ ಬೆಂಗಳೂರು ಆಸ್ಪತ್ರೆಗೆ ಕರೆದುಕೊಂಡು ಹೋಗುವಷ್ಟರಲ್ಲಿ ಚಾಸಾ.2 ರವರು ಮೂರ್ಛೆ ಹೋಗಿದ್ದರು. ಚಾಸಾ.2 ರವರ ಕೈಯಿಂದ ರಕ್ತ ಬರುತ್ತಿತ್ತು. ಮೂರ್ಛೆ ಹೋಗಿದ್ದು ಹಾಗೂ ರಕ್ತ ಬರುತ್ತಿದುದ್ದನ್ನು ಬಿಟ್ಟರೆ ಚಾಸಾ.2 ರವರಲ್ಲಿ ಏನು ಬದಲಾವಣೆ ಆಗಿರಲಿಲ್ಲ ಎಂದರೆ ಸರಿ. ಗಲಾಟೆ ಬಗ್ಗೆ ಚಾಸಾ.2 ನನಗೆ ಏನು ಹೇಳಿರಲಿಲ್ಲ ಎಂದರೆ ಸರಿಯಲ್ಲ. ಚಾಸಾ.3 ರವರ ಚಾಡಿ ಮಾತನ್ನು

ಕೇಳಿಕೊಂಡು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ಬೆಳ್ಳೂರಿನಲ್ಲಿ ಮದ್ಯಾಹ್ನ ಪಡೆದುಕೊಂಡರು. ನಾನು ಯಾವುದೇ ಹೇಳಿಕೆಯನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ಘಟನೆ ಬಗ್ಗೆ ವೈದ್ಯರಿಗೆ ಚಾಸಾ.7 ಮಾಹಿತಿ ನೀಡಿದರು. ಬೆಂಗಳೂರಿನ ಆಸ್ಪತ್ರೆಯಲ್ಲಿ ವೈದ್ಯರಿಗೆ ಚಾಸಾ.2 ರವರ ಅಮ್ಮ ಮಾಹಿತಿ ನೀಡಿದರು. ಚಾಸಾ.2 ಸ್ವತಃ ಪೆಟ್ಟು ಮಾಡಿಕೊಂಡಿರುವ ವಿಚಾರ ಗ್ರಾಮಸ್ಥರಿಗೆ ಗೊತ್ತಿದ್ದು ಹಾಗೂ ನಾನು ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ , ಚಾಸಾ.2 ರವರಿಗೆ ಜವಳಿ ಕುಡುಗೋಲಿನಿಂದ ಹಲ್ಲೆ ಮಾಡಿರಲಿಲ್ಲ ಹಾಗೂ ಬೈದಿರಲಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಏನು ಇಲ್ಲ

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.